# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 29 ಫ್ರಾ.ಸಾ. : 28**

| | | |
|---|---|---|
| ಸಾಕ್ಷಿಯ ಹೆಸರು | : | ಸುರೇಶ ಬಿಕಾರೊ ಆಚಾರಿ |
| ತಂದೆಯ ಹೆಸರು | : | ಬಿಕಾರೊ ಆಚಾರಿ |
| ವಯಸ್ಸು | : | 85 ವರ್ಷ |
| ಕೆಲಸ | : | ಆಚಾರಿ ಕೆಲಸ |
| ವಾಸ | : | ಅಂಬೋಲಿ, ಕುಂಬಾರವಾಡ |

**ದಿನಾಂಕಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

(ಸಾಕ್ಷಿಯು ತನಗೆ ಕನ್ನಡ ಭಾಷೆ ಬರುವುದಿಲ್ಲ ಹಾಗೂ ತಾನು ಕೊಂಕಣಿ ಭಾಷೆ ಬಲ್ಲವನಾಗಿರುವುದಾಗಿ ತಿಳಿಸಿದ್ದು, ಸಾಕ್ಷಿಯು ನೀಡಿದ ಹೇಳಿಕೆಯನ್ನು ಕನ್ನಡ ಭಾಷೆಗೆ ಭಾಷಾಂತರಿಸಲು ನ್ಯಾಯಾಲಯದಲ್ಲಿ ಹಾಜರಿದ್ದ ಡಿ.ಸಿ.ಎಲ್.ಎ.ಡಿ.ಸಿ., ಶ್ರೀ ಕೆ.ಬಿ.ಎನ್. ನೇಮಿಸಲಾಯಿತು. ಸದರಿ ವಕೀಲರಿಗೆ ಕನ್ನಡ ಹಾಗೂ ಕೊಂಕಣಿ ಭಾಷೆ ಬಲ್ಲವರಾಗಿದ್ದು ತಿಳಿಸಿದ್ದು, ಸಾಕ್ಷಿಯ ಕೊಂಕಣಿ ಭಾಷೆಯಲ್ಲಿ ನೀಡಿದ ಸಾಕ್ಷ್ಯವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ದಾಖಲಿಸಿಕೊಳ್ಳಲಾಯಿತು)

**ಭಾಷಾಂತಣಕಾರರಾದ ಶ್ರೀ ಕೆ.ಬಿ.ಎನ್. ವಕೀಲರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಚಾಸಾ-30 ವಿದ್ಯಾಧರ ಆಚಾರಿ ನನ್ನ ಮಗ. ನಮ್ಮ ಮನೆ ಜೊಯಿಡಾ ತಾಲೂಕಿನ ಕುಂಬಾರವಾಡದ ಬೊಗಾಳಿಯಲ್ಲಿ ಇರುತ್ತವೆ. ನಾವು ಆಚಾರಿ ಕೆಲಸ ಹಾಗೂ ಕೃಷಿ ಕೆಲಸವನ್ನು ಮಾಡುತ್ತೇವೆ. ಆಚಾರಿ ಕೆಲಸ ಎಂದರೆ ಕತ್ತಿ ಹಾಗೂ ಇತರೇ ಕೃಷಿ ಸಲಕರಣೆಗಳನ್ನು ಮಾಡುವ ಕೆಲಸ ಆಗಿರುತ್ತದೆ. ಸದರಿ ಸಲಕರಣೆಗಳನ್ನು ನಾವು ನಮ್ಮ ಮನೆಯಲ್ಲಿಯೇ ಮಾಡಿಕೊಡುತ್ತೇವೆ.

ಕಳೆದ 4–5 ವರ್ಷಗಳ ಹಿಂದೆ ಪೊಲೀಸರು ಇಬ್ಬರನ್ನು ಕರೆದುಕೊಂಡು ನಮ್ಮ ಮನೆಯ ಹತ್ತಿರ ಬಂದಿದ್ದರು. ಕತ್ತಿಯನ್ನು ಖರೀದಿಸಿಕೊಂಡು ಹೋಗಿದ್ದಾರಾ ಎಂದು ವಿಚಾರಿಸಲು ನಮ್ಮ ಮನೆಗೆ ಬಂದಿದ್ದರು. ಪೊಲೀಸರು ನಮ್ಮ ಮನೆಗೆ ಬಂದಿದ್ದ 4–5 ದಿನಗಳ ಮೊದಲು, ಪೊಲೀಸರೊಂದಿಗೆ ಬಂದಿದ್ದ ಆ ಇಬ್ಬರು ವ್ಯಕ್ತಿಗಳು ನಮ್ಮ ಮನೆಗೆ ಬಂದು ಒಂದು ಕಬ್ಬಿಣದ ಪಟ್ಟಿಯನ್ನು ನೀಡಿ, ಕತ್ತಿಯನ್ನು ಮಾಡಲು ಹೇಳಿ ಹೋಗಿದ್ದರು ಹಾಗೂ 3–4 ದಿನಗಳ ನಂತರ ಕತ್ತಿಯನ್ನು ತೆಗೆದುಕೊಂಡು ಹೋಗಲು ಬಂದಿದ್ದು, ಆಗ ಕತ್ತಿ ತಯಾರಾಗದ ಕಾರಣ, ಬೇರೊಂದು ಕತ್ತಿಯನ್ನು ಖರೀದಿ ಮಾಡಿ, ರೂ.100/– ನೀಡಿ ಹೋಗಿದ್ದರು. ನಂತರ ಪೊಲೀಸರು ನಮ್ಮ ಮನೆಗೆ ಬಂದಾಗ ಅವರು ನೀಡಿ ಹೋಗಿದ್ದ ಕಬ್ಬಿಣದ ಪಟ್ಟಿಯನ್ನು ಅವರಿಗೆ ನೀಡಿರುತ್ತೇನೆ. ಆಗ ಪೊಲೀಸರು ಅಲ್ಲಿ ಬರವಣಿಗೆ ಮಾಡಿ, ಕಬ್ಬಿಣದ ಪಟ್ಟಿಯನ್ನು ತೆಗೆದುಕೊಂಡರು ಹಾಗೂ ನನ್ನ ಹೆಬ್ಬೆಟ್ಟು ಗುರುತನ್ನು ಪಡೆದುಕೊಂಡರು. ಸಾಕ್ಷಿಯು ತಾನು ಹೆಬ್ಬೆಟ್ಟು ಗುರುತು ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ–56 ಎಂದು ಗುರುತಿಸಲಾಗಿರುತ್ತದೆ. ಆ ಸಮಯದಲ್ಲಿ ಪೊಲೀಸರು ಫೋಟೊವನ್ನೂ ಸಹ ತೆಗೆದಿರುತ್ತಾರೆ. ನಿಪಿ–32 ಫೋಟೊದಲ್ಲಿ ಸಾಕ್ಷಿಯು ತಾನು ಕಬ್ಬಿಣದ ಪಟ್ಟಿಯನ್ನು ನೀಡುತ್ತಿರುವುದಾಗಿ ನೋಡಿ ಗುರುತಿಸಿರುತ್ತಾರೆ.

2. ನಿಪಿ–32 ಫೋಟೊದಲ್ಲಿರುವ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಮತ್ತು ನ್ಯಾಯಾಲಯದ ವಿ.ಸಿ. ಯಲ್ಲಿರುವ 3 ನೇ ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ ಮುದ್ದೆಮಾಲು ನಂ.12 ಕಬ್ಬಿಣದ ಪಟ್ಟಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಯ ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

3. ನಾನು ಶಾಲೆಗೆ ಹೋಗಿರುವುದಿಲ್ಲ. ಅಂಬೋಳಿ ಮತ್ತು ಬೋಗಾಳಿ ಎಂಬುದು ಬೇರೆ ಬೇರೆ ಊರುಗಳು ಎಂದರೆ ಸಾಕ್ಷಿಯು ಅಂಬೋಳಿಯು ಒಂದು ಗ್ರಾಮ ಹಾಗೂ ನಾವು ವಾಸ ಮಾಡುವ ಜಾಗವನ್ನು ಬೋಗಾಳಿ ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. ಬೋಗಾಳಿಯಿಂದ ಕುಂಬಾರವಾಡಕ್ಕೆ ಸುಮಾರು 13 ಕಿ.ಮೀ. ದೂರವಾಗುತ್ತದೆ. ಕೃಷಿ ಸಲಕರಣಗಳು ಅಂದರೆ, ಅಡಿಕೆ ತೆಗೆಯುವ ಕತ್ತಿ, ಹುಲ್ಲು ಕತ್ತರಿಸುವ ಕತ್ತಿ, ಬೇಲಿ ಕತ್ತರಿಸುವ ಕತ್ತಿ ಇತರೇ ಸಲಕರಣೆಗಳನ್ನು ಮಾಡುತ್ತೇವೆ. ಈಗ ನ್ಯಾಯಾಲಯದ ಮುಂದೆ 2 ಮತ್ತು 3 ನೇ ಆರೋಪಿತರನ್ನು ಪೊಲೀಸರು ಕರೆದುಕೊಂಡು ಬಂದಾಗ ಮೊದಲ ಬಾರಿಗೆ ನೋಡಿರುತ್ತೀರಿ ಎಂದರೆ ಸಾಕ್ಷಿಯು, ಕಬ್ಬಿಣದ ಪಟ್ಟಿಯನ್ನು ಕೊಡಲು ಬಂದಾಗ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

4. ನಿಮ್ಮ ಮನೆಯ ಅಕ್ಕ–ಪಕ್ಕದಲ್ಲಿ ಬೇರೆ ಮನೆಗಳು ಇದೆಯಾ ಎಂದರೆ ಸಾಕ್ಷಿಯು ಸ್ವಲ್ಪ ದೂರದಲ್ಲಿರುತ್ತದೆ ಎಂದು ನುಡಿಯುತ್ತಾರೆ. ಪೊಲೀಸರು ನಮ್ಮ ಮನೆಗೆ ಬಂದಾಗ, ಇತರೇ ಯಾರೂ ಜನರು ಬಂದಿರುವುದಿಲ್ಲ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ಮಗ, ಸೊಸೆ ಮತ್ತು ಮೂವರು ಮೊಮ್ಮಕ್ಕಳು ಇರುತ್ತೇವೆ. ಪೊಲೀಸರು ನಮ್ಮ ಮನೆಯ ಬಳಿ ಬಂದಾಗ ಬೆಳಿಗ್ಗೆ ಸುಮಾರು 10.00 ಗಂಟೆಯಾಗಿತ್ತು. ಆಚಾರಿ ಕೆಲಸ ಮಾಡಲು ಲೈಸೆನ್ಸ್ ಪಡೆದ ಬಗ್ಗೆ ನಾನು ಯಾವುದೇ ದಾಖಲೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ. ಕತ್ತಿ ಮಾಡಲು ಕಬ್ಬಿಣದ ಪಟ್ಟಿಯನ್ನು ನೀಡಿದವರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಕಬ್ಬಿಣದ ಪಟ್ಟಿಯನ್ನು ನೀಡಲು ಬಂದಾಗ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೆವು. ಆರೋಪಿತರು ಕಬ್ಬಿಣದ ಪಟ್ಟಿಯನ್ನು ನೀಡಿದಾಗ, ನನಗೆ ಕತ್ತಿಯನ್ನು ಮಾಡಲು ಆಗುವುದಿಲ್ಲ, ತೆಗೆದುಕೊಂಡು ಹೋಗಿ ಎಂದು ಹೇಳಿದರೂ ಸಹ ಆರೋಪಿತರು ಕಬ್ಬಿಣದ ಪಟ್ಟಿಯನ್ನು ಕೊಟ್ಟು, ಕತ್ತಿಯನ್ನು ಮಾಡಲು ಹೇಳಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಕಳೆದ 10–12 ವರ್ಷಗಳಿಂದ ಆರೋಗ್ಯ ಸಮಸ್ಯೆ ಇರುತ್ತದೆ.

5. ಆರೋಪಿತರು ಕತ್ತಿಯನ್ನು ಖರೀದಿಸಿದಾಗ, ನಮ್ಮ ಬಳಿ ಅದು ಒಂದೇ ಕತ್ತಿ ಇರುತ್ತದೆ. ಆ ಸಮಯದಲ್ಲಿ ನಾನು ಬೇರೆ ಯಾವುದೇ ಸಲಕರಣೆಗಳನ್ನು ತಯಾರು ಮಾಡಿ ಇಟ್ಟಿರುವುದಿಲ್ಲ.

ನನಗೆ ಆರೋಗ್ಯ ಸಮಸ್ಯೆ ಇದ್ದಾಗ, ನನ್ನ ಮಗ ಆಚಾರಿ ಕೆಲಸ ಮಾಡುವುದಿಲ್ಲ, ಆತ ಕೃಷಿ ಕೆಲಸ ಮಾಡುತ್ತಾನೆ. ನಾವು ಆಚಾರಿ ಕೆಲಸ ಮಾಡಲು ಕಬ್ಬಿಣವನ್ನು ದಾಂಡೇಲಿಯಿಂದ ತರುತ್ತೇವೆ. ದಾಂಡೇಲಿಯಿಂದ ಕಬ್ಬಿಣವನ್ನು ಖರೀದಿಸಿ ತರುವಾಗ, ಈಗ ನ್ಯಾಯಾಲಯದ ಮುಂದಿರುವ ಮುದ್ದೆಮಾಲು ನಂ.12 ಕಬ್ಬಿಣದ ಪಟ್ಟಿಯ ರೀತಿಯ ಕಬ್ಬಿಣಗಳನ್ನೂ ಸಹ ತರುತ್ತೇವೆ ಎಂದರೆ ಸರಿ. ಮುದ್ದೆಮಾಲು ನಂ.12 ಕಬ್ಬಿಣದ ಪಟ್ಟಿಯನ್ನು 2 ಮತ್ತು 3 ನೇ ಆರೋಪಿತರೇ ನೀಡಿದ್ದ ಕಬ್ಬಿಣದ ಪಟ್ಟಿ ಎಂಬ ಬಗ್ಗೆ ಯಾವುದಾದರೂ ಗುರುತು ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಮನೆಯಲ್ಲಿ ಮುದ್ದೆಮಾಲು ನಂ.12 ಕಬ್ಬಿಣದ ಪಟ್ಟಿಯ ರೀತಿಯ ಬೇರೆ ಕಬ್ಬಿಣದ ಪಟ್ಟಿ ಇರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ಯಾವ ವಿಷಯಕ್ಕಾಗಿ ನಮ್ಮ ಮನೆಗೆ ಬಂದಿದ್ದರು ಎಂದರೆ ಗೊತ್ತಿಲ್ಲ, ಆದರೆ ಪೊಲೀಸರು 2 ಮತ್ತು 3 ನೇ ಆರೊಪಿತರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. 2 ಮತ್ತು 3 ನೇ ಆರೋಪಿತರು ಎಷ್ಟು ಬಾರಿ ನಮ್ಮ ಮನೆಯ ಬಳಿ ಬಂದಿದ್ದರು ಎಂದರೆ ಸಾಕ್ಷಿಯು, ಮೊದಲ ಬಾರಿಗೆ ಕಬ್ಬಿಣದ ಪಟ್ಟಿಯನ್ನು ಕೊಡಲು, ಎರಡನೇ ಬಾರಿಗೆ ಕತ್ತಿಯನ್ನು ಖರೀದಿಸಲು ಬಂದಾಗ ಹಾಗೂ ಕೊನೆಯದಾಗಿ ಪೊಲೀಸರೊಂದಿಗೆ ಬಂದಿದ್ದರು ಎಂದು ನುಡಿಯುತ್ತಾರೆ.

6. 2018 ರಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಪೊಲೀಸರು ವಿಚಾರಣೆಗೆ ಕರೆದಿದ್ದರಾ ಎಂದರೆ ಸಾಕ್ಷಿಯು ಕರೆದಿದ್ದರು ಎಂದು ನುಡಿಯುತ್ತಾರೆ. ಪೊಲೀಸರು 2 ಮತ್ತು 3 ನೇ ಆರೋಪಿತರನ್ನು ನಮ್ಮ ಮನಗೆ ಕರೆದುಕೊಂಡು ಬಂದು ಹೋದ ನಂತರ ನನ್ನನ್ನು ವಿಚಾರಣೆಗೆ ಕರೆಸಿರುತ್ತಾರೆ. ವಿಚಾರಣೆಗೆ ಪೊಲೀಸರು ಪೊಲೀಸ್ ಠಾಣೆಗೆ ಕರೆಸಿದ್ದರಾ ಎಂದರೆ ಸಾಕ್ಷಿಯು ಠಾಣೆಗೆ ಬಂದಂತೆ ನೆನಪಿರುತ್ತದೆ ಎಂದು ನುಡಿಯುತ್ತಾರೆ. ನಾನು ಎಂದಿಗೂ ಆಚಾರಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಎಂದಿಗೂ ನಮ್ಮ ಮನೆಗೆ ಬಂದಿಲ್ಲ ಮತ್ತು ಕತ್ತಿ ತಯಾರಿಸಲು ಯಾವುದೇ ಕಬ್ಬಿಣದ ಪಟ್ಟಿಯನ್ನು ನೀಡಿಲ್ಲ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಕಬ್ಬಿಣದ ಪಟ್ಟಿಯನ್ನು ನೀಡಿ ಹೋದ, 3-4 ದಿನಗಳ ನಂತರ ಮತ್ತೆ ಬಂದಿದ್ದು, ನಾನು ಕತ್ತಿಯನ್ನು ತಯಾರಿಸಿಲ್ಲದ ಕಾರಣ, ನನ್ನ ಬಳಿ ಬೇರೆ ಕತ್ತಿಯನ್ನು ಖರೀದಿಸಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು 2 ಮತ್ತು 3 ನೇ ಆರೋಪಿತರನ್ನು ನಮ್ಮ ಮನೆಗೆ ಕರೆದುಕೊಂಡು ಬಂದು, ನನ್ನ ಬಳಿಯಿಂದ ಮುದ್ದೆಮಾಲು ನಂ.12 ಕಬ್ಬಿಣದ ಪಟ್ಟಿಯನ್ನು ಪಡೆದುಕೊಂಡು, ಬರವಣಿಗೆ

ಮಾಡಿ, ನನ್ನ ಸಹಿಯನ್ನು ಪಡೆದುಕೊಂಡರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರ ಹೆಸರು ನನಗೆ ಗೊತ್ತಿಲ್ಲ ಹಾಗೂ ಅವರ ಪರಿಚಯ ನನಗೆ ಇರುವುದಿಲ್ಲ. ಪೊಲೀಸರ ಮಾತು ಕೇಳಿ, ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/–

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ